


**ಜೋಗಿಂದರ್ ಸಿಂಹ ನಿರಾಲಾ**

ಪಂಜಾಬಿಯ ಪ್ರಸಿದ್ಧ ಕಥೆಗಾರರು ಹಾಗೂ ಖ್ಯಾತ ವಿಮರ್ಶಕರು. ನಿವೃತ್ತ ಪ್ರೊಫೆಸರ್ ಆಗಿರುವ ಇವರ ಏಳು ಪುಸ್ತಕಗಳು ಇದುವರೆಗೆ ಪ್ರಕಟಗೊಂಡಿವೆ. ಇವರು ಪಂಜಾಬಿ ಲೇಖಕರ ಸಭೆಯ ಅಧ್ಯಕ್ಷರೂ ಆಗಿದ್ದಾರೆ.


ಏನಾದರೂ ಮಾಡಬಲ್ಲ ಎಂದು ತಿಳಿಯುತ್ತಿತ್ತು. ಆಗ ಸಂಗೀತ ಕಛೇರಿಗಳು ನಡೆಯುತ್ತಿದ್ದವು. ಲಛಮೀಬಾಯಿಯ ಹಾಡುಗಳನ್ನು ಕೇಳಲು ಜನ ದೇಶದ ಮೂಲೆ ಮೂಲೆಗಳಿಂದ ಬರುತ್ತಿದ್ದರು. ಅವಳು 'ನಾನು ನಿನ್ನ ಮರೆತೆನೆಂದು ಹೇಳುವವರು ಯಾರು, ನಿನ್ನ ನೆನಪುಗಳನ್ನು ಎದೆಯಲ್ಲಿ ಒತ್ತಿಟ್ಟುಕೊಂಡಿದ್ದೇನೆ' ಎಂಬ ಗಜಲ್ ಹಾಡಿದಾಗ ಹಣದ ಮಳೆಗರೆಯಲಾಗುತ್ತಿತ್ತು.

ಜನ ಈಗಲೂ ಬರುತ್ತಿದ್ದರು, ಮೊದಲಿಗಿಂತಲೂ ಹೆಚ್ಚು ಜನ ಬರುತ್ತಿದ್ದರು, ಆದರೆ ಅವನಿಗೆ ಯಾರೂ ಹಾಡು ಹೇಳುವಂತೆ ಕೇಳಿಕೊಂಡಿದ್ದು ನೆನಪಿಲ್ಲ. ಮದ್ಯದ ಅಮಲಿನಲ್ಲಿ ಮುಳುಗಿದ್ದು, ಸಿಗರೇಟಿನ ಹೊಗೆ ಮತ್ತು ಬೀಡಾದ ಪಿಚಕಾರಿಗಳು ಅವರನ್ನು ಅವಶ್ಯವಾಗಿ ಅಸಭ್ಯರನ್ನಾಗಿ ಮಾಡುತ್ತಿತ್ತು. ಅವರು ದೇಹವನ್ನಷ್ಟೇ ಯಾಚಿಸುತ್ತಿದ್ದರು. ರಾಮ ನೋಡಿದ, ಈಗ ಪೇಟೆ ಆರಂಭವಾಗಿತ್ತು. ಕೋಠಾದ ಮಹಿಳೆಯರು ಕಿಡಕಿಗಳ ಬಳಿ ಕೂತು ಗಿರಾಕಿಗಳಿಗೆ ಸಂಜ್ಞೆ ಮಾಡಲಾರಂಭಿಸಿದರು. ರಾಮನಿಗೆ ಈಗ ದಂಧೆಯಲ್ಲಿ 'ಇಳಿಕೆ'ಯಾಗುತ್ತಿರುವ ಕಾರಣ ತಿಳಿಯಿತು. ಅವರೇ ಖುದ್ದು ಕಿಡಕಿಗಳ ಬಳಿ ಕೂತು ಗಿರಾಕಿಗಳನ್ನು ಕರೆಯುತ್ತಿರುವಾಗ ತನ್ನಂಥ ಬುದ್ದುವಿನ ಅವಶ್ಯಕತೆ ಏಕಿದೆ? ಅವನು ಈ ಬಗ್ಗೆ ಸಾಕಷ್ಟು ಹೊತ್ತಿನಿಂದ ಯೋಚಿಸುತ್ತಿದ್ದ, ಹೀಗೆಯೇ ನಡೆದರೆ ಈ ಮಹಿಳೆಯರು ರಸ್ತೆಯಲ್ಲಿ ಅಲೆಯಬೇಕಾಗುತ್ತದೆ. ರಾಮ ಇನ್ನು ಈ ದಂಧೆಯನ್ನು ಬಿಡಬೇಕೆಂದು ಯೋಚಿಸಿದ. ಈಗ ಇಲ್ಲಿ ಹನ್ನೆರಡು ವರ್ಷದ ಛೋಕರಿ ಸಹ ಕೂರುತ್ತಾಳೆ. ಹನ್ನೆರಡು ವರ್ಷದ ಕಲ್ಪನೆ ಮೂಡಿದಾಗ ಅವನಿಗೆ, ತನ್ನೊಳಗೆ ಒಂದು ಬಿರುಗಾಳಿಯೇ ಎದ್ದಿದೆ ಎಂದು ಅನ್ನಿಸಿತು.

ಹನ್ನೆರಡು ವರ್ಷಗಳ ಹಿಂದೆ, ಅವನು ತನ್ನ ಹಳ್ಳಿಯಲ್ಲಿರುತ್ತಿದ್ದ. ಹಳ್ಳಿಯ ಮಣ್ಣಿನ ರಸ್ತೆಗಳ ದೂಳು ಈಗಲೂ ಆವರಿಸುತ್ತಿದೆ ಎಂದು ಅನ್ನಿಸಿತು. ಆಗ ಈ ಜಗಲಿಯಿಂದ ಆ ಜಗಲಿಗೆ, ಆ ಜಗಲಿಯಿಂದ ಈ ಜಗಲಿಗೆ ದೌಡಾಯಿಸಿ ಹೋಗುತ್ತಿದ್ದ. ಆಗ ಅವನಿಗೆ ಯಾವುದೇ ಚಿಂತೆಯಿರಲಿಲ್ಲ. ಇಡೀ ದಿನ ಕಳ್ಳು ಕುಡಿದು ಗೋಡೆಗಳಿಗೆ ಡಿಕ್ಕಿ ಹೊಡೆಯುತ್ತಿದ್ದ.

ಅವನ ಹೆಂಡತಿ ದೇವಿ, ದೇವತೆಯೇ ಆಗಿದ್ದಳು. ಆದರೆ ಅವಳು ಇಂಥ ನಿರ್ಲಜ್ಜನ ಮನೆಗೆ ಬಂದ ನಂತರ ಅವಳು ತಾಳ್ಮೆಯ ಗುಟುಕು ಕುಡಿದು ನಿರ್ಲಿಪ್ತಳಾಗಿದ್ದಳು. ಕಡೆಗೆ ಅವಳು ಒಬ್ಬ ಜಾದೂಗಾರನಿಗೆ ವಶವಾದಳು: ಅವನು ಅವಳನ್ನು ಬಂಗಾಳಕ್ಕೋ, ಬಿಹಾರಕ್ಕೋ ಕರೆದೊಯ್ದನೆಂದು ಹೇಳಲಾಗುತ್ತದೆ. ದೇವಿ ಹೀಗೆ ಹೋದದ್ದರಿಂದ ರಾಮನ ಮನಸ್ಸು ತುಂಬಿ ಬಂದಿತ್ತು. ಅವನು ಕೆಲವು ದಿನಗಳು ಮನೆಯಿಂದ ಹೊರಗೇ ಬರಲಿಲ್ಲ, ನಂತರ ಅವನು ರಾತ್ರಿ ವೇಳೆಯಲ್ಲಿ ಹಳ್ಳಿಯನ್ನೇ ತ್ಯಜಿಸಿ ಹೋಗಲು ತೀರ್ಮಾನಿಸಿದ. ಈಗ ಅವನದು ಎಂಬುದು ಏನು ತಾನೇ ಉಳಿದಿತ್ತು! ಅವನು ತನ್ನ ಪ್ರೀತಿಯ ಹಳ್ಳಿಯನ್ನು ತ್ಯಜಿಸುವಾಗ, ಆ ರಾತ್ರಿ ತುಂಬಾ ಅಂಧಕಾರಮಯವಾಗಿದ್ದು, ಭಯ ಹುಟ್ಟಿಸುವಂತಿತ್ತು.

ಮೊದಲು ಅವನು ರಾಜಧಾನಿಗೆ ಬಂದಾಗ, ಅವನಿಗೆ ದೇವಿಯ ನೆನಪು ತೀವ್ರವಾಗಿ ಕಾಡುತ್ತಿತ್ತು. ಅವನು ಒಳಗೊಳಗೇ ಬಿಕ್ಕಳಿಸಿ ರೋದಿಸುತ್ತಿದ್ದ. ಆದರೆ ಅವನು ಈ ದಂಧೆಗಿಳಿದಾಗ, ಅವಳು ಮಾತ್ರ ದೇವಿಯಲ್ಲ, ಸಾವಿರಾರು ದೇವಿಯರಿದ್ದಾರೆ ಎಂಬುದು ತಿಳಿಯಿತು.

ರಾಮ ಪೇಟೆಗೆ ಬಂದಿದ್ದ. ಪೇಟೆಯಲ್ಲಿ ಕೋಲಾಹಲವಿತ್ತು, ಹೊಸದಾಗಿ ಬಂದಿದ್ದ ಯುವಕ ಶಾಮಲಾಲ್ ಎದುರಿಗಿದ್ದ ಕಂಭದ ಬಳಿ ನಿಂತು ಗಿರಾಕಿಗಳಿಗೆ ಏನೋ ಹೇಳುತ್ತಿದ್ದ. ಇಬ್ಬರು ಗಿರಾಕಿಗಳು ಸೂಟು ಬೂಟಿನಲ್ಲಿದ್ದರು. ಅವರ ಉಡುಪುಗಳನ್ನು ನೋಡಿದಾಗ, ಅವರು ಕುಲೀನ ವಂಶದವರೆಂದು ತೋರುತ್ತಿತ್ತು. ಇಂಥ ಗಿರಾಕಿಗಳು ತನಗೆ ಒಬ್ಬರು ಸಿಕ್ಕರೂ, ತನಗೆ ಸಾಕಷ್ಟು ಹಣ ಸಿಗುತ್ತದೆ ಎಂದು ಯೋಚಿಸಿ ರಾಮ ಮುಂದಕ್ಕೆ ಬಂದು ಅವರ ಬಳಿ ನಿಂತ, ಆಗ ಶಾಮಲಾಲ್ ಅವನನ್ನು ಸಿಟ್ಟಿನಿಂದ ನೋಡಿದ. ಅವನು ಸ್ವಲ್ಪ ಮುಂದಕ್ಕೆ ಹೋಗಿ, 'ಬೇರೊಬ್ಬರ ದಂಧೆಯನ್ನು ಹಾಳು ಮಾಡುವುದು ದಂಧೆಯ ಸಿದ್ಧಾಂತವಲ್ಲ. ದೇವರಿಗೆ ಕೊಡಬೇಕೆಂದು ಅನ್ನಿಸಿದರೆ, ನಾನಿದ್ದಲ್ಲಿಯೇ ಗಿರಾಕಿಗಳು ಸಿಗುತ್ತಾರೆ. ಇಲ್ಲದಿದ್ದಲ್ಲಿ ಬೆಳಿಗ್ಗೆಯ ಹಾಗೆಯೇ ಮಂಡಕ್ಕಿ ತಿಂದು ನೀರು ಕುಡಿಯುತ್ತೇನೆ, ಬೆಳಿಗ್ಗೆಯ ತನಕ ಬದುಕಿರಲು ಸಾಕು' ಎಂದು ಯೋಚಿಸಿದ. ಈಗ ಅವನಿಗೆ ತನ್ನ ಜೀವನ ಭಾರ ಎಂದು ಅನ್ನಿಸಿತು.

'ಅಣ್ಣಾ, ಇಲ್ಲಿ ಹಸಿ ಮಾಲು ಸಿಗುತ್ತಾ?...'

ರಾಮ ನಿದ್ರೆಯಿಂದ ಎಚ್ಚರವಾದ. ಅವನೆದುರು ದಪ್ಪ ತೊಡೆಯ, ಕೊಳಕು ಹಲ್ಲುಗಳ ದಢೂತಿ ವ್ಯಕ್ತಿಯೊಬ್ಬ ನಿಂತು ಮುಗುಳ್ನಗುತ್ತಿದ್ದ. ನಾನೂಗೆ ಅವನ ಮಾತು ಅರ್ಥವಾಗಲಿಲ್ಲ, ಅವನು ಸುಮ್ಮನೆ ಕೋಠಾದೆಡೆಗೆ ಸಂಜ್ಞೆ ಮಾಡಿದ.

'ಅಲ್ಲಣ್ಣ, ನಾನು ಹೇಳೋದೇನೆಂದರೆ, ಯಾವನಾದ್ರು ಛೋಕ್ರ (ಹುಡುಗ)... ಆ ದಢೂತಿ ವ್ಯಕ್ತಿ ತನ್ನ ಹಲ್ಲುಗಳನ್ನೆಲ್ಲಾ ಪ್ರದರ್ಶಿಸುತ್ತಾ ಮೈಮುರಿದ.

ರಾಮನಿಗೆ ತನ್ನನ್ನು ತಾನೇ ಅರ್ಪಿಸಿಕೊಳ್ಳಲು ಮನಸ್ಸಾಯಿತು, ಆದರೆ ಅವನ ಕಣ್ಣುಗಳೆದುರು ಅಂಧಕಾರ ಮೂಡಿದಂತಾಯಿತು, ಎದುರಿಗಿದ್ದ ಎಲ್ಲರೂ ಅಸ್ಪಷ್ಟವಾಗಿ ಕಾಣಲಾರಂಭಿಸಿದರು; ಇನ್ನು ಇಲ್ಲಿ ತಾನು ಹೆಚ್ಚು ಹೊತ್ತು ನಿಲ್ಲಲಾರೆ ಎಂದು ಭಾಸವಾಯಿತು.

ಪ್ರತಿಕ್ರಿಯಿಸಿ: feedback@sudha.co.in